**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 2078/2022**

**ಚಾ.ಸಾ.** 15

**ಪ್ರಾ.ಸಾ.** 5

**ದಿನಾಂಕಃ 23.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಶ್ರೀಶೈಲ ಕೌಜಲಗಿ |
| ತಂದೆಃ ಗಂಡನ ಹೆಸರು | ಶಿವಪ್ಪ |
| ಉದ್ಯೋಗ | ಪಿ ಐ ಕಲಘಟಗಿ ಪೊಲೀಸ ಠಾಣೆ |
| ವಯಸ್ಸು | 43 ವರ್ಷ |
| ವಾಸಸ್ಥಳ | ಕಲಘಟಗಿ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದ**

ದಿಃ 18.06.2022 ರಂದು ಈ ಪ್ರಕರಣದ ತನಿಖೆಯನ್ನು ಚಾಸಾ-14 ರವರಿಂದ ವಹಿಸಿಕೊಂಡು ಹಿಂದಿನ ತನಿಖೆಯನ್ನು ಪರಿಶೀಲಿಸಿ ದಿಃ 19.06.2022 ರಂದು ಅಪಘಾತ ಸ್ಥಳಕ್ಕೆ ಬೇಟಿ ನೀಡಿ ಚಾಸಾ-1 ರವರು ತೋರಿಸಿದ ಚಾಸಾ-2 ಮತ್ತು 3 ರವರನ್ನು ಹಾಜರುಪಡಿಸಿಕೊಂಡು ಸದರಿಯವರ ಸಮಕ್ಷಮ ಬೆಳಿಗ್ಗೆ 9.00 ಗಂಟೆಯಿಂದ 10.00 ಗಂಟೆಯವರೆಗೆ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿ ಭಾವಚಿತ್ರವನ್ನು ತೆಗೆಸಿದೆ. ನಂತರ ಅದೇ ದಿನ ಸದರಿ ಪಂಚರೊಂದಿಗೆ ಚಾಸಾ-1 ರವರು ತೋರಿಸಿದ ಅಪಘಾತಕ್ಕೆ ಇಡಾದ ವಾಹನ ಸಂಖ್ಯೆ ಕೆ ಎ 23 ಎನ್ 6045 ನೇದ್ದರ ಇರುತ್ತದೆ. ಈ ವಾಹನದ ಪಂಚನಾವೆಯನ್ನು ಮಧ್ಯಾಹ್ನ 1.00 ಗಂಟೆಯಿಂದ 2.00 ಗಂಟೆಯವರೆಗೆ ಮಾಡಿ ಮುಗಿಸಲಾಯಿತು.

ಅದೇ ದಿನ ಸಾಕ್ಷಿದಾರರಾದ ಚಾಸಾ-6 ರಿಂದ 10 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆನು. ದಿಃ 24.06.2022 ರಂದು ಅಪಘಾತಕ್ಕೆ ಇಡಾದ ಕ್ರೂಜರ ವಾಹನದ ಮಾಲೀಕರಿಗೆ ಎಮ್ ವಿ ಆಕ್ಟ ಕಲಂ 133 ಅಡಿಯಲ್ಲಿ ನೋಟಿಸನ್ನು ಜಾರಿ ಮಾಡಿ ಅದರ ಸ್ವೀಕೃತಿಯನ್ನು ಪಡೆದುಕೊಂಡೆನು. ಅದೇ ದಿನ ವಾಹನದ ಮಾಲೀಕರ ಹೇಳಿಕೆಯನ್ನು ಪಡೆದುಕೊಂಡೆನು. ಸದರಿ ಆಪಾದಿತನಾದ ವಾಹನ ಮಾಲೀಕ ಹಾಗೂ ಚಾಲಕನನ್ನು ದಸ್ತಗಿರಿ ನಿಯಮ ಪಾಲಿಸಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ಅದೇ ದಿನ ವಾಹನದ ಮಾಲೀಕನ ವಾಹನದ ಎಲ್ಲ ದಾಖಲೆಗಳನ್ನು ಹಾಜರುಪಡಿಸಿ ಇಂಡೆಮ್‌ನಿಟಿ ಬಾಂಡ್ ನೀಡಿದ ಕಾರಣ ವಾಹನವನ್ನು ಮಾಲೀಕರಿಗೆ ಬಿಡುಗಡೆ ಮಾಡಿರುತ್ತೇನೆ. ದಿಃ 01.07.2022 ರಂದು ಚಾಸಾ-11 ರವರು ಕಲಂ 65 ಐ ಇ ಎ ಅಡಿಯಲ್ಲಿ ಪ್ರಮಾಣ ಪತ್ರವನ್ನು ನೀಡಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿದೆನು. ದಿಃ 12.09.2022 ರಂದು ಅಪಘಾತಕ್ಕೆ ಇಡಾದ ಕ್ರೂಜರ ವಾಹನ ತಾಂತ್ರಿಕ ಪರೀಕ್ಷೆ ಮಾಡಿದ್ದು ಅದರ ವರದಿಯನ್ನು ಚಾಸಾ-13 ರವರಿಂದ ಪಡಿದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೆನೇ.

ದಿಃ 07.10.2022 ರಂದು ಚಾಸಾ-12 ರವರಿಂದ ಮೃತ ಗಣಪತಿ ರವರು ಪಿ ಎಮ್ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆನು. ಅದೇ ದಿನ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ್ದೇನು.

ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ1 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ2 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ವಾಹನ ತಡೆ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ3 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ3(ಡಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ಎಮ್ ವಿ ಆಕ್ಟ ಕಲಂ 133 ಅಡಿಯಲ್ಲಿ ನೋಟಿಸನ್ನು ನೀಡಿ ಪಡೆದ ಸ್ವೀಕೃತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ11 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ11(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಪಿ ಎಮ್ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ8 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ8(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಐ ಎಮ್ ವಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ9 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ9(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಪಂಚನಾಮೆಯ ವೇಳೆಯಲ್ಲಿ ತೆಗೆದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ4 ಮತ್ತು 5 ಎಂದು, ಸಾಕ್ಷಿಯು ಕಲಂ 65 ಐ ಇ ಎ ಕಾಯಿದೆಯ ಅಡಿಯಲ್ಲಿ ಸ್ವೀಕರಿಸಿದ ಪತ್ರವನ್ನು ನಿಪಿ13 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ13(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯನ್ನು ನೋಡಿ ಗುರುತಿಸಿದ್ದು, ಸದರಿ ವ್ಯಕ್ತಿಯು ಹೆಸರು ಮಹಾಲಿಂಗ ಮಿರ್ಜಿ ಎಂದು ಈ ಪ್ರಕರಣದ ಆರೋಪಿ ಎಂದು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಅಪಾದಿತನ ಪರ ಶ್ರೀ ಎಸ್ ಆರ್ ಹೆಚ್ ವಕೀಲರಿಂದ**

ಈ ಪ್ರಕರಣದ ಕಡತವನ್ನು ಚಾಸಾ-14 ರವರಿಂದ ಪಡೆದ ನಂತರ ಅದರಲ್ಲಿ ಇದ್ದ ದಾಖಲಾತಿಗಳನ್ನು ನಾನು ಪರಿಶೀಲಿಸಿದ್ದೆ. ಸದರಿ ಪರಿಶೀಲನೆ ವೇಳೆ ನಿಪಿ-6 ಮತ್ತು ಎಫ್ ಐ ಆರ್ ರಲ್ಲಿ ಈ ಪ್ರಕರಣ ಸುಳ್ಳು ಎಂದು ಕಂಡು ಬಂದಿತು ಎಂದರೆ ಸರಿಯಲ್ಲ. ಚಾಸಾ-14 ರವರು ನೀಡಿದ ಕಡತದ ಮೇಲೆ ಸುಳ್ಳು ತನಿಖೆಯನ್ನು ಮಾಡಿದ್ದೀರಿ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆಯ ವೇಳೆ ನಾನು ಗುನ್ನಾ ಸ್ಥಳಕ್ಕೆ

ಹೋಗಿಲ್ಲ ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆ ಮಾಡುವ ಪೂರ್ವದಲ್ಲಿ ನೋಟಿಸನ್ನು ನೀಡಿರುವುದಾಗಿ ನುಡಿಯುತ್ತಾರೆ. ನಿಪಿ2 ರಲ್ಲಿರುವ ಕಚ್ಚಾ ನಕಾಶೆಯನ್ನು ಠಾಣೆಯಲ್ಲಿ ತಯಾರಿಸಲ್ಪಟ್ಟಿದ್ದು ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ನಿಪಿ4 ಮತ್ತು 5 ರಲ್ಲಿರುವ ಭಾವಚಿತ್ರಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಈ ಪ್ರಕರಣದ ಅಪಘಾತಕ್ಕೆ ಯಾವುದೇ ರೀತಿ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಠಾಣೆಯ ಅಂಕೆ ಸಂಖ್ಯೆಯ ಸಲುವಾಗಿ ಈ ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೊಂದಂತಹ ವ್ಯಕ್ತಿಗೆ ಪರಿಹಾರ ಕೊಡಿಸುವ ಉದ್ದೇಶದಿಂದ ಈ ಪ್ರಕರಣದ ದಾಖಲಾತಿಗಳನ್ನು ಆರೋಪಿಯ ವಿರುದ್ಧ ಸೃಷ್ಟಿಸಿ ಇಂದು ಮಾನ್ಯ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು-ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**